

ಸ್ವಲ್ಪ ಹೊತ್ತು ತಂಗಿ, ಹಸಿವು–ನೀರಡಿಕೆಗಳನ್ನು ತೀರಿಸಿಕೊಂಡು ಮುಂದೆ ಪ್ರಯಾಣ ಮಾಡುತ್ತಿದ್ದ ಸಂಗತಿಯನ್ನು ಈಗಲೂ ಕೆಲವರು ಜ್ಞಾಪಿಸಿಕೊಳ್ಳುತ್ತಾರೆ.

ಒರಳುಕಲ್ಲನ್ನು ಸಾಮಾನ್ಯವಾಗಿ ಗಾತ್ರಕ್ಕನುಗುಣವಾಗಿ ಒಂದು ಇಡಿಯಾದ ಬೆಣಚು ಕಲ್ಲನ್ನು ಕೊರೆದು ಮಾಡಿರುತ್ತಾರೆ. ಈಗೀಗ ಗ್ರಾನೈಟ್ ಕಲ್ಲಿನಲ್ಲೂ ಮಾಡುತ್ತಾರೆ. ಕೆಳಗಿನ ಅಗಲವಾದ, ಅಂಚು ಇರುವ ಕಲ್ಲಿನಲ್ಲಿ ಒಂದು ಕುಳಿಯಿರುತ್ತದೆ. ಹಾಗೆಯೇ ರುಬ್ಬಲು ಇದರ ಜೊತೆಗಾತಿಯಾಗಿ ಒಂದು ಗುಂಡಾದ ಕಲ್ಲಿರುತ್ತದೆ. ಇದನ್ನು ಹಿಡಿದುಕೊಳ್ಳಲು ಮೇಲ್ಭಾಗದಲ್ಲಿ ಒಂದು ಮರದ ಗೂಟವಿರುತ್ತದೆ. ರುಬ್ಬುವಾಗ ಈ ಗೂಟ ಒಮ್ಮೊಮ್ಮೆ ಸಡಿಲವಾಗಿ, ಕಿತ್ತು ಕೈಗೆ ಬರುವುದುಂಟು. ಆಗ ಸುತ್ತಿಗೆಯಲ್ಲಿ ಮೆತ್ತಗೆ ಹೊಡೆದು, ಕೆಲವೊಮ್ಮೆ ಸಣ್ಣ ಬೆಣೆಯನ್ನು ಕೂರಿಸಿ, ಗಟ್ಟಿ ಮಾಡಿಕೊಳ್ಳಬೇಕಾಗುತ್ತದೆ. ಒರಳುಕಲ್ಲಿನ ಇನ್ನೊಬ್ಬ ಜೊತೆಗಾತಿ ಎಂದರೆ ಒನಕೆ. ಒರಳುಕಲ್ಲಿನಲ್ಲಿ ಅರೆಯುವ ಮೊದಲು ಕಲ್ಲನ್ನು ಶುಚಿಗೊಳಿಸಿ ಸಿದ್ಧಮಾಡಿಕೊಳ್ಳಬೇಕಾಗುತ್ತದೆ. ಮೊದಲ ಬಾರಿಗೆ ಉಪಯೋಗಿಸುವುದಾದರೆ ಯಾವುದಾದರೂ ಧಾನ್ಯವನ್ನು ಸ್ವಲ್ಪ ಹಾಕಿ ನೀರು ಸೇರಿಸಿ ರುಬ್ಬಿ ಹಿಟ್ಟು ಮಾಡಿಕೊಂಡೋ ಅಥವಾ ಯಾವುದಾದರೂ ಸಾಮಗ್ರಿಗಳನ್ನು ಕುಟ್ಟಿ ತೆಗೆದ ಅನಂತರ ನೀರಿನಿಂದ ಸ್ವಚ್ಛ ಮಾಡಿಕೊಳ್ಳಬೇಕಾಗುತ್ತದೆ. ನಮ್ಮ ಹಿರಿಯರು ಒರಳುಕಲ್ಲನ್ನು ಸ್ವಚ್ಛ ಮಾಡಲು